KACM010005402019

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ **35/2019 and 143/2019**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಓಂಕಾರಪ್ಪ | | ಪಿಡಬ್ಲೂ - 3 |
| ತಂದೆಯ ಹೆಸರು | - ಲೋಕೇಶಪ್ಪ | | ಸಿಡಬ್ಲೂ - 3 |
| ವಯಸ್ಸು | - 23 ವರ್ಷ | | |
| ಉದ್ಯೋಗ | - ಬುಕ್ಕಾಂಬೂದಿ ಗ್ರಾಮಪಂಚಾಯಿತಿಯಲ್ಲಿ ವಾಟರ್ ಮ್ಯಾನ್ ಕೆಲಸ | | |
| ವಾಸ ಸ್ಥಳ | - ಬುಕ್ಕಾಂಬೂದಿ | | |

ದಿನಾಂಕಃ 15-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

(ದಿನಾಂಕಃ 20-07-2021 ರಂದು ಆದ ಆದೇಶದ ಅನ್ವಯ ಎಸ್ ಸಿ ನಂಃ 143/2019 ಇದು ಪ್ರಸ್ತುತ ಪ್ರಕರಣದ Split-up ಪ್ರಕರಣವಾಗಿರುವುದರಿಂದ ಸದರಿ ಪ್ರಕರಣವನ್ನು ಈ ಪ್ರಕರಣದೊಂದಿಗೆ ಸಾಕ್ಷ್ಯ ದಾಖಲಿಸುವ ನಿಮಿತ್ತ Club ಮಾಡಲಾಗಿರುತ್ತದೆ).

<u>ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -</u>

1. ನಾನು ಕಳೆದ 3 ವರ್ಷಗಳಿಂದ ಬುಕ್ಕಾಂಬೂದಿ ಗ್ರಾಮ ಪಂಚಾಯಿತಿಯಲ್ಲಿ ಮಾಟರ್ ಮ್ಯಾನ್ ಎಂದು ಕೆಲಸ ಮಾಡುತ್ತಿದ್ದೇನೆ.

2. ಫ್ರಾಸಾ.1 ರಶ್ಮಿ ಇವರು ಪಂಚಾಯಿತಿಯಲ್ಲಿ ಪ್ರಭಾರ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂದು ಕೆಲಸ ಮಾಡುತ್ತಿದ್ದರೆ. ಪ್ರಾಸಾ.2 ಸಂತೋಷ್ ಇವರು ಕಸ ತುಂಬುವ ಆಟೋ ಚಾಲಕರಾಗಿರುತ್ತಾರೆ. ಸುಮಾರು 2 ವರೆ ವರ್ಷಗಳ ಹಿಂದೆ ಒಂದು ದಿನ ನಾನು, ಸಂತೋಷ್, ಪ್ರಾಸಾ.1 ರಶ್ಮಿ ಮೇಡಮ್ ಮತ್ತು ಪೊಲೀಸರು ರವರ ಜೊತೆ ಬೆಳಿಗ್ಗೆ 10.30 ಗಂಟೆ ಸಮಯಕ್ಕೆ ಬುಕ್ಕಾಂಬೂದಿಯ ಬುಕ್ಕರಾಯನ ಕೆರೆಗೆ ಹೋಗಿರುತ್ತೇವೆ. ನಾನು ಸದರಿ ಕೆರೆಯನ್ನು ದೂರದಿಂದ ನೋಡಿದಾಗ ಕೆರೆಯ ದಡದಲ್ಲಿ ಒಂದು ದಪ್ಪವಾದ ಶವ ಬಿದ್ದಿತ್ತು. ಸದರಿ ಶವ ಗಂಡಸಿನದೋ ಹೆಂಗಸಿನದೋ ಎಂದು ನಾನು ಗಮನಿಸಿರುವುದಿಲ್ಲ. ಸದರಿ ಶವವು ಕೆರೆಯ ಹತ್ತಿರ ಇರುವ ಮಣ್ಣಿನ ಜಾಗದಲ್ಲಿ ಬಿದ್ದಿತ್ತು. ಶವದ ಮೈ ಮೇಲೆ ಏನು ಬರವಣಿಗೆ ಇತ್ತು ನಾನು ನೋಡಿರುವುದಿಲ್ಲ. ಸದರಿ ಜಾಗದಲ್ಲಿ ತುಂಬಾ ಜನ ಸೇರಿದ್ದರು. ಸದರಿ ವ್ಯಕ್ತಿಯು ಏನಾಗಿ ಸತ್ತಿರಬಹುದು ಎಂದು ನನಗೆ ಗೊತ್ತಾಗಿರುವುದಿಲ್ಲ. ನಿ.ಪಿ.3 ರಿಂದ 6 ಪೋಟೋಗಳಲ್ಲಿ ಕಂಡು ಬರುವ ಶವವು ಆ ದಿನ ನಾನು ಕೆರೆಯ ದಡದಲ್ಲಿ ನೋಡಿ ಶವವೇ ಎಂದು ಹೇಳಲು ಆಗುವುದಿಲ್ಲ, ಯಾಕೇಂದರೆ ನಾನು ಸದರಿ ಕೆರೆಯ ದಡದಿಂದ ದೂರದಲ್ಲಿ ನಿಂತಿದ್ದೆನು. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದಃ-</u>

3. ನಾನು ಮೇಲೆ ಹೇಳಿದಂತೆ ಕೆರೆಯ ಬಳಿ ಹೋದ ದಿಃ 09.11.2018 ರ ಮಧ್ಯಾಹ್ನ 3.45 ಗಂಟೆ ಸಮಯ ಆಗಿತ್ತು ಎಂದರೆ ಸರಿಯಲ್ಲ. ಆ ದಿನ ನಾವು ಬುಕ್ಕಾಂಬೂದಿ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಇದ್ದಾಗ ನಮ್ಮ ಪಂಚಾಯಿತಿಯ ಸದಸ್ಯರಾದ ನಾಗಬೋಗನಹಳ್ಳಿಯ ಯತೀಶ್ ರವರು ಫ್ರಾಸಾ.1 ರಶ್ಮಿ ಇವರಿಗೆ ಪೋನ್ ಮಾಡಿ ಬುಕ್ಕರಾಯನ ಕೆರೆಯಲ್ಲಿ ಒಂದು ಚೀಲ ತೇಲುತ್ತಿದೆ ಎಂದು ಮತ್ತು ಸದರಿ ಚೀಲದಲ್ಲಿ ಯಾವುದೋ ಶವ ಇರಬಹುದು ಎಂದು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಆಗ ನಾನು ಸಂತೋಷ್ ಮತ್ತು ಫ್ರಾಸಾ.1 ರಶ್ಮಿ ಇವರು ಬುಕ್ಕರಾಯ ಕೆರೆಯ ಹತ್ತಿರ ಹೋದೆವು ಎಂದರೆ ಸರಿಯಲ್ಲ.  ಆಗ ನಾವು ಕೆರೆಯ ಹತ್ತಿರ ಹೋಗಿ ನೋಡಿದಾಗ ಕೆರೆಯ ನೀರಿನಲ್ಲಿ ಒಂದು ಚೀಲ ತೇಲುತ್ತಿತ್ತು ಎಂದರೆ ಸರಿಯಲ್ಲ. ಸದರಿ ಚೀಲವನ್ನು ಫ್ರಾಸಾ.1 ರವರು ಅಲ್ಲಿ ಸೇರಿದ್ದ ಸಾರ್ವಜನಿಕರ ಸಹಾಯದಿಂದ ಮೇಲೆ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚೀಲದಿಂದ ಕೊಳೆತ ದುರ್ವಾಸನೆ ಬರುತ್ತಿತ್ತು ಎಂದರೆ ಸರಿಯಲ್ಲ. ಚೀಲದ ಬಾಯಿಯನ್ನು ಕಟ್ಟಿದ್ದ ವೈರ್ ನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಇನ್ನೊಂದು ಹಳದಿ ಬಣ್ಣದ ಚೀಲವಿದ್ದು, ಅದರ ಬಾಯಿಯನ್ನು ಸಹ ಕಟ್ಟಲಾಗಿತ್ತು ಎಂದರೆ ಸರಿಯಲ್ಲ. ಸದರಿ ಹಳದಿ ಚೀಲದ ಬಾಯಿಯನ್ನು ಸಹ ಬಿಚ್ಚಿ ನೋಡಿದಾಗ ಅದರಲ್ಲಿ ತಲೆ ಇಲ್ಲದೆ ಇರುವ ಒಂದು ಗಂಡಸಿನ ಮೃತ ದೇಹ ಇತ್ತು ಎಂದರೆ ಸರಿಯಲ್ಲ.

4. ಸದರಿ ಮೃತ ದೇಹದ ಮೇಲೆ ವಾಣಿ ಮತ್ತು ಐಶ್ವರ್ಯ ಎಂಬ ಹಚ್ಚೆ ಗುರುತು ಇತ್ತು ಎಂದರೆ ಸರಿಯಲ್ಲ. ಸದರಿ ಶವವನ್ನು ನೋಡಿದಾಗ ಯಾರೋ ದುಷ್ಕರ್ಮಿಗಳು 1-2 ದಿನಗಳ ಹಿಂದೆ ಹರಿತವಾದ ಆಯುಧದಿಂದ ಕುತ್ತಿಗೆಯನ್ನು ಕಡಿದು ರುಂಡ ಮತ್ತು ಮುಂಡವನ್ನು ಬೇರೆ ಮಾಡಿ ಗುರುತು ಸಿಗಬಾರದು ಎಂಬ ಕಾರಣದಿಂದ ಮೃತ ದೇಹವನ್ನು ಚೀಲದಲ್ಲಿ ಹಾಕಿ ಎಸೆದು ಹೋಗಿರುತ್ತಾರೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೃತ ದೇಹವು ಈಗ ನಾನು ನೋಡುತ್ತಿರುವ ನಿ.ಪಿ.3 ರಿಂದ 6 ಪೋಟೋಗಳಲ್ಲಿ ಕಂಡು ಬರುವ ಮೃತ ದೇಹವೇ ಆಗಿರುತ್ತದೆ ಎಂದರೆ ಗೊತ್ತಿಲ್ಲ.
5. ಈ ಎಲ್ಲಾ ವಿಚಾರದ ಬಗ್ಗೆ ನಾನು ದಿಃ 09.11.2018 ರಂದು ಈಗ ನನಗೆ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯ ಅಂಶಗಳನ್ನು ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿ.ಪಿ.7 ಎಂದು ಗುರುತಿಸಲಾಯಿತು. ನನಗೆ ಘಟನೆಯ ಬಗ್ಗೆ ಎಲ್ಲಾ ವಿಷಯಗಳು ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ನಿ.ಪಿ.7 ರಂತೆ ಹೇಳಿಕೆ ನೀಡಿದ್ದರು ಸಹ ಅದರಲ್ಲಿ ಇರುವ ಸಂಗತಿಗಳನ್ನು ಅಲ್ಲಗಳೆದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಪಿ.ಇ.ಎಸ್ ವಕೀಲರು – **1** ರಿಂದ **4** ಆರೋಪಿತರ</u>

ಪರವಾಗಿ

6. ಪ್ರತಿ ದಿವಸ ನಾನು ಬೆಳಿಗ್ಗೆ 9.00 - 9.30 ಗಂಟೆಗೆ ಪಂಚಾಯಿತಿ ಕಚೇರಿಗೆ ಹೋಗುತ್ತೇನೆ ಎಂದರೆ ಸರಿ. ಆ ದಿನ ನಾವು ಕಚೇರಿಯಲ್ಲಿ ಇದ್ದಾಗ ಪೊಲೀಸರು ಕಚೇರಿಗೆ ಬಂದಿದ್ದು ಆಗ ಸಮಯ ಬೆಳಿಗ್ಗೆ ಸುಮಾರು 10.00 ಗಂಟೆಯಾಗಿತ್ತು ಎಂದರೆ ಸರಿ. ಆ ಪೊಲೀಸರು ಬುಕ್ಕರಾಯನ ಕೆರೆಯ ದಡದ ಮೇಲೆ ಒಂದು ಶವ ಸಿಕ್ಕಿದ್ದು ಅದರ ಕುರಿತಂತೆ ಫ್ರಾಸಾ.1 ರಶ್ಮಿ ಇವರಿಂದ ದೂರು ಬರೆಸಿಕೊಂಡಿರುತ್ತಾರೆ ಎಂದರೆ ಸರಿ. ನಾನು ಫ್ರಾಸಾ.1 ರಶ್ಮಿ ಇವರ ಜೊತೆ ಕೆಲಸ ಮಾಡುವುದರಿಂದ ಅವರು ಬರೆದಿರುವ ಬರವಣಿಗೆಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ಸಮಯದಲ್ಲಿ ಪೊಲೀಸ್ ವೃತ್ತ ನಿರೀಕ್ಷಕರು ಹೇಳಿದಂತೆ ಫ್ರಾಸಾ.1 ರಶ್ಮಿ ಇವರು ದೂರು ಬರೆದಿರುತ್ತಾರೆ ಎಂದರೆ ಸರಿ. ಈಗ ಸಾಕ್ಷಿಗೆ ನಿ.ಪಿ.1 ದೂರನ್ನು ತೋರಿಸಿದ್ದು ಅದರಲ್ಲಿ ಇರುವ ಬರವಣಿಗೆ ಮತ್ತು ಸಹಿ ರಶ್ಮಿ ರವರದ್ದೇ ಆಗಿರುತ್ತದೆ ಎಂದರೆ ಸರಿ. ಸದರಿ ಬರವಣಿಗೆಯನ್ನು ಬೆಳಿಗ್ಗೆ ಸುಮಾರು 10.30 ಗಂಟೆ ಸಮಯದಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.1 ಬರೆಯಲು ಖಾಲಿ ಪೇಪರ್ ನ್ನು ಪೊಲೀಸರೆ ಕೊಟ್ಟಿರುತ್ತಾರೆ ಎಂದರೆ ಸರಿ. ನಂತರ ಪೊಲೀಸರು ನನ್ನ, ಸಂತೋಷ್ ಮತ್ತು ಫ್ರಾಸಾ.1 ರಶ್ಮಿ ಇವರನ್ನು ಕೆರೆಯ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಾನು ದೂರದಲ್ಲಿ ನಿಂತು ಕೆರೆಯ ದಡದ ಮೇಲೆ ಶವವನ್ನು ನೋಡಿದ್ದು ಅದರ ಮೇಲೆ ಏನು ಇತ್ತು ಮತ್ತು ಅದಕ್ಕೆ

ತಲೆ ಇತ್ತೋ ಇಲ್ಲವೋ ಎಂಬುದನ್ನು ಸಹ ನಾನು ನೋಡಿರುವುದಿಲ್ಲ. ನಂತರ ನಾನು, ಸಂತೋಷ್ ಮತ್ತು ರಶ್ಮಿ ಇವರು ಪೊಲೀಸರ ವಾಹನದಲ್ಲಿ ಕಚೇರಿಗೆ ಬಂದಿರುತ್ತೇವೆ ಎಂದರೆ ಸರಿ. ನಂತರ ಸಂಜೆ 5.30 ಗಂಟೆಯಾದ ಮೇಲೆ ನಮ್ಮ ನಮ್ಮ ಕರ್ತವ್ಯ ಮುಗಿಸಿ ನಮ್ಮ ನಮ್ಮ ಮನೆಗಳಿಗೆ ಹೋಗಿರುತ್ತೇವೆ ಎಂದರೆ ಸರಿ.

<u>ಮರು ವಿಚಾರಣೆ - ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.